Geetha Shishu Shikshana Sangha (R)
SIMHA SUBBAMAHALAKSHMI FIRST GRADE COLLEGE
KRS ROAD, MYSURU-570 016
ಯಶಸ್ YASHAS SSFGC Weekly Newsletter

**Volume – 1** **Issue No.– 26** **16th – 23rd November 2019**

# ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಗಳ ಉದ್ಘಾಟನೆ
# ಕನ್ನಡ ನಾಡು ಎಂದರೆ ಕೇವಲ ಭೂ ಭಾಗವಲ್ಲ
# ಅದು ಭಾಷೆ, ಸಂಸ್ಕೃತಿಗಳ ಸಂಗಮ

**– ಪ್ರೊ.ಎ.ಶಿವಣ್ಣ, ನಿವೃತ್ತ ಪ್ರಾಂಶುಪಾಲರು**

ನವಂಬರ್ 18 ರಂದು ಕನ್ನಡ ರಾಜ್ಯೋತ್ಸವದ ಉಧ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಭೆಯ ಮುಖ್ಯ ಅತಿಥಿಯಾಗಿ ಮಹಾಜನ ಪದವಿ ಪೂರ್ವ ಕಾಲೇಜಿನ ವಿಶ್ರಾಂತ ಪ್ರಾಚಾರ್ಯರಾದ ಶ್ರೀಯುತ ಶಿವಣ್ಣನವರು ಆಗಮಿಸಿದರು.



**ಮುಖ್ಯ ಅತಿಥಿಗಳು ಕಾಲೇಜಿನ ಅಧಿಕಾರಿಗಳೊಂದಿಗೆ**

ಪ್ರಭುತ್ವ ಶಾಹಿತ್ವ ಮತ್ತು ಬ್ರಿಟಿಷರ ದಾಸ್ಯದಿಂದ ಮುಕ್ತಗೊಂಡು ನಮ್ಮ ಅಸ್ಮಿತೆಗಾಗಿ ಪ್ರಜಾ ತಂತ್ರ ವ್ಯವಸ್ಥೆಯೆಡೆಗೆ ಹೊರಳುವ ಹೊತ್ತಿನಲ್ಲಿ ಭಾಷಾವಾರು ಪ್ರಾಂತ್ಯ ವಿಭಜನೆಗೊಂಡ ಕಾಲಮಾನಕ್ಕೆ ದಕ್ಷಿಣ ಭಾಗದಲ್ಲಿ ಮೈಸೂರು ಸಂಸ್ಥಾನ ಪ್ರಾಬಲ್ಯ ಹೊಂದಿತ್ತು,

ಅ ಸಂದರ್ಭದಲ್ಲಿ ಅಂದರೆ 1956ರಲ್ಲಿ ದಕ್ಷಿಣ ಭಾರತದ ಎಲ್ಲಾ ಕನ್ನಡ ಭಾಷೆ ಮಾತನಾಡುವ ಪ್ರದೇಶಗಳನ್ನು ಒಂದೆಡೆ ವಿಲೀನಗೊಳಿಸಿ ನಿರ್ಮಾಣಗೊಂಡ ರಾಜ್ಯವೇ ಕರ್ನಾಟಕ, ಇದರ ಆಡಳಿತ ಭಾಷೆಯೇ ಕನ್ನಡ, ಆ ದಿನವನ್ನೇ ಕನ್ನಡ ರಾಜ್ಯೋತ್ಸವವೆಂದು ಕನ್ನಡಿಗರು ಹೆಮ್ಮೆಯಿಂದ ಆಚರಿಸುತ್ತಿದ್ದು, ಇಂದಿಗೆ ಸುಮಾರು 64 ರಾಜ್ಯೋತ್ಸವದ ನಾಡ ಹಬ್ಬವನ್ನು ಆಚರಿಸಲಾಗಿದೆ ಎಂದು ಅವರು ಹೇಳಿದರು.

ವಿಶ್ವದಲ್ಲಿಯೇ ಪ್ರಜಾತಂತ್ರ ವ್ಯವಸ್ಥೆಯ ಬೃಹತ್ ರಾಷ್ಟ್ರವೆಂದರೆ ಭಾರತ. ಈ ದೇಶ ವಿಭಿನ್ನ ಸಂಸ್ಕೃತಿ ಮತ್ತು ಆಚರಣೆಗಳನ್ನು ಹೊಂದಿದ್ದು ವಿವಿಧತೆಯಲ್ಲಿ ಏಕತೆಯನ್ನು ಸಾರುವ ರಾಷ್ಟ್ರ. ಶಾಂತಿ ಸಹನೆ ಮತ್ತು ಭ್ರಾತೃತ್ವವನ್ನು ಮೇಳೈಸಿಕೊಂಡಿರುವ ನಮ್ಮ ನಾಡಿನಲ್ಲಿ ಯಾರು ಎಲ್ಲಿಯಾದರೂ ನೆಲೆಸಿ ಸ್ವಚ್ಛಂಧವಾಗಿ ಜೀವಿಸುವ ಅವಕಾಶವಿದೆಯೆಂದು ಮುಖ್ಯ ಅತಿಥಿಗಳಾಗಿ ಆಗಮಿಸಿದ ಮಹಾಜನ ಪದವಿ ಪೂರ್ವ ಕಾಲೇಜಿನ ವಿಶ್ರಾಂತ ಪ್ರಾಚಾರ್ಯರಾದ ಶ್ರೀಯುತ ಶಿವಣ್ಣನವರು ಸಂವಾದ ಕಾರ್ಯಕ್ರಮದಲ್ಲಿ ಪ್ರತಿಕ್ರಿಯಿಸಿದರು.

ಆಧುನಿಕ ಜಗತ್ತಿನಲ್ಲಿ ಕನ್ನಡ ಭಾಷೆಗೆ ಇರುವ ಸವಾಲುಗಳು ಮತ್ತು ಪರಿಹಾರೋಪಾಯ ಮಾರ್ಗಗಳೇನು ಎಂಬುದರ ಬಗ್ಗೆ ಸುದೀರ್ಘವಾದ ಸಂವಾದ ಕಾರ್ಯಕ್ರಮ ನಡೆಯಿತು. ವರ್ತಮಾನದಲ್ಲಿ ಪಟ್ಟಣ ಪ್ರದೇಶಗಳಲ್ಲಿ ಕನ್ನಡ ಭಾಷಾ ಬಳಕೆ ಕಡಿಮೆಯಾಗಿದ್ದು,

ಅಂಗ್ಲ ವ್ಯಾಮೋಹ ಅತಿ ಹೆಚ್ಚು ವ್ಯಾಪಿಸಿದೆ. ಬಹುರಾಷ್ಟ್ರೀಯ ಕಂಪನಿಗಳಲ್ಲಿ ಇಂಗ್ಲಿಷ್ ಬಲ್ಲವರು ಮಾತ್ರ ಉದ್ಯೋಗಕ್ಕೆ ಅರ್ಹರೆಂಬ ಭಾವನೆ ನಮ್ಮ ಜನಮಾನಸರಲ್ಲಿ ಬೇರು ಬಿಟ್ಟಿದೆ. ಇಂತಹ ಕೀಳರಿಮೆಗಳು ನಮ್ಮಿಂದ ದೂರಾದಾಗ ನಮ್ಮ ಭಾಷೆ ಮತ್ತು ವ್ಯಕ್ತಿತ್ವಗಳಿಗೆ ಮೆರಗು ಬರುತ್ತದೆ.

ನಮ್ಮ ರಾಜಧಾನಿ ಬೆಂಗಳೂರು ಒಂದು ಪುಟ್ಟ ಭಾರತವಾಗಿ ನಿರ್ಮಾಣಗೊಂಡಿರುವುದೇ ಇದಕ್ಕೆ ಜ್ವಲಂತ ನಿದರ್ಶನ. ರಾಷ್ಟ್ರದ ವಿವಿಧ ಮೂಲೆ ಮೂಲೆಗಳಿಂದ ಜೀವನ ನಿರ್ವಹಣೆಗಾಗಿ ಉದ್ಯೋಗವನ್ನರಸಿ ಬಂದು ನೆಲೆ ಕಂಡುಕೊಂಡು ದೀರ್ಘಕಾಲದಿಂದ ಇಲ್ಲಿಯೇ ನೆಲೆಸಿ ಕನ್ನಡಿಗರಂತೆ ಬದುಕುತ್ತಿದ್ದರೂ ಈ ನೆಲದ ಭಾಷೆಯನ್ನು ಬಳಸದಿರುವುದು ವಿಷಾದನಿಯ. ಬಹು ಭಾಷೆಗಳು ಬಳಕೆಯಲ್ಲಿದ್ದು,



**ಸಂವಾದ ನಡೆಯುತ್ತಿರುವುದು**

ಕನ್ನಡ ಮಾತ್ರ ಕಣ್ಮರೆಯಾಗಿದೆ. ಹಾಗೂ ಇಂಗ್ಲಿಷ್ ಬಾರದ ಕಾರಣಕ್ಕೆ ಈ ನೆಲದ ಮಕ್ಕಳು ಉದ್ಯೋಗ ವಂಚಿರಾಗಿರುವುದು ಮತ್ತೊಂದು ದುರದೃಷ್ಟಕರ ಸಂಗತಿ.

ಸ್ವಾತಂತ್ರ್ಯನಂತರದಲ್ಲಿ ಕನ್ನಡಿಗರು, ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ಉದ್ಯೋಗಾರ್ಥಿಗಳಿಗೆ ಮೀಸಲಾತಿ ಬೇಕೆಂಬ ಬೇಡಿಕೆಯನ್ನು ಇಟ್ಟಿದ್ದಾರೆ. ಇದು ಕನ್ನಡ ಬಳಕೆಯಾಗುವ ಇಲಾಖೆಗಳಲ್ಲಿ ಮತ್ತು ವಿಭಾಗಗಳಲ್ಲಿ ಸಾಧ್ಯವಾಗಬಹುದು, ಆದರೆ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಸಾಧ್ಯವಾಗುತ್ತಿಲ್ಲವಲ್ಲ. ಇಂದು ಕನ್ನಡ ಭಾಷೆ ಕೇವಲ ಆಡಳಿತಾತ್ಮಕವಾಗಿ ಬಳಕೆಗೊಳ್ಳುತ್ತಿದ್ದು, ಇದರ ಅಳಿವು–ಉಳಿವು ಈ ನೆಲದಲ್ಲಿ ಜೀವಿಸುತ್ತಿರುವ ನಮ್ಮೆಲ್ಲರ ಮನೆ ಮನಗಳಲ್ಲಿ ಮತ್ತು ವಿದ್ಯಾರ್ಥಿ, ಪೋಷಕವರ್ಗದಲ್ಲಿರುವ ಭಾವನೆಗಳು ಕಳೆಯಬೇಕು. ಆಂಗ್ಲ ಭಾಷಾ ವ್ಯಾಮೋಹದಿಂದ ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಯನ್ನು ಸರಿಯಾಗಿ ಉಚ್ಚರಿಸಲು ಬರುತ್ತಿಲ್ಲ. ಈ ಪರಿಸ್ಥಿತಿ ಬದಲಾಗಬೇಕು. ನಮ್ಮ ದೈನಂದಿನ ಜೀವನದಲ್ಲಿ ಕನ್ನಡವನ್ನು ಹೆಚ್ಚಾಗಿ ಬಳಸಿದಾಗ ಮಕ್ಕಳಿಗೆ ಭಾಷೆಯ ಸಮಷ್ಠಿ ಜ್ಞಾನ ಲಭಿಸುತ್ತದೆ. ಭಾಷೆಯ



**ಯಶಸ್ ಬಿಡುಗಡೆ**

ಸಾಹಿತ್ಯದ ಸಾರವನ್ನು ಸವಿಯಲು ಸಾಧ್ಯವಾಗುತ್ತದೆ. ವರ್ತಮಾನ ಕಾಲಘಟ್ಟದಲ್ಲಿ ಕನ್ನಡ ಭಾಷೆ ಮತ್ತು ನಾಡು ನುಡಿಗಾಗಿ ಹಲವಾರು ಸಂಘಟನೆಗಳು ತಲೆಯೆತ್ತಿವೆ. ಇವುಗಳ ಕಾರ್ಯವ್ಯಾಪ್ತಿಯೇನು ಎಂಬುದು ಯೋಚಿಸಬೇಕಾದ ವಿಚಾರ. ಭಾಷೆ ಮತ್ತು ಜೀವನೋಪಾಯ ಎರಡನ್ನೂ ಪ್ರತ್ಯೇಕವಾಗಿಸಿದಾಗ ಮಾತ್ರ ನಾವು ಕನ್ನಡವನ್ನು ಕಟ್ಟಿ ಬೆಳೆಸಬಹುದು. ಎಲ್ಲಿಯವರೆಗೆ ಆಂಗ್ಲಬಾಷೆ ಉದ್ಯೋಗ ನೀಡುತ್ತದೆ ಎಂಬ ಭಾವನೆ ನಮ್ಮಲ್ಲಿ ನೆಲೆಗೊಂಡಿರುತ್ತದೆಯೋ ಅಲ್ಲಿಯವರೆಗೆ ನಮ್ಮ ಭಾಷೆಗಳನ್ನು ಸಮೃದ್ಧವಾಗಿ ಕಟ್ಟಿ ಬೆಳೆಸಲು ಸಾಧ್ಯವಿಲ್ಲ.



**ಡಾ. ಕೆ .ವಿ ಪ್ರಭಾಕರ**

ನಮ್ಮ ಕಾಲೇಜಿನ ನಿರ್ದೇಶಕರಾದ ಡಾ. ಕೆ .ವಿ ಪ್ರಭಾಕರ ಅವರು ಮಾತಾನಾಡುತ್ತಾ ವಿದ್ಯಾರ್ಥಿಗಳಲ್ಲಿರುವ ಭಾಷಾ ಪ್ರೀತಿಯನ್ನು ಕನ್ನಡದಲ್ಲಿ ಸಹಿ ಮಾಡಿಸುವ ಮೂಲಕ ಆರಂಭಿಸಿ ಎಂದರು. ವಿದ್ಯಾರ್ಥಿಗಳಲ್ಲಿರುವ ಭಾಷಾ ವ್ಯಾಮೋಹ ವಿದ್ಯಾರ್ಥಿದಿಸೆಯಿಂದಲೇ ಆರಂಭವಾದರೆ ಮಾತ್ರ ಕನ್ನಡ ಮತ್ತೆ ಸುವರ್ಣಯುಗದತ್ತ ಸಾಗುತ್ತದೆ ಎಂದು ಹೇಳಿದರು. ಕನ್ನಡ ಭಾಷೆಯ ಅಳಿವು ಉಳಿವು ಎಲ್ಲವೂ ನಮ್ಮ ಕನ್ನಡಿಗರ ಕೈಯಲ್ಲಿದೆ ಎಂದು ಎಲ್ಲರನ್ನೂ ಜಾಗೃತರನ್ನಾಗಿಸಿದರು.

**ಈ ಕಾರ್ಯಕ್ರಮದಲ್ಲಿ ಶ್ರೀಮತಿ ಪೂರ್ಣಿಮ ಕೆ ಸ್ವಾಗತಿಸಿದರು, ಪ್ರಿಯಾಂಕ ವಂದಿಸಿದರು ಮತ್ತು ಶ್ರೀಮತಿ ಶೃತಿ ಡಿ ನಿರೂಪಣೆ ಮಾಡಿದರು**

**ವರದಿ**
**ಕೆ ಎಂ ಮಹದೇವ**
**ಕನ್ನಡ ವಿಭಾಗದ ಮುಖ್ಯಸ್ಥರು**

## ಜನ್ಮದಿನ

## ಇಂದಿರಾ ಗಾಂಧಿ



ಇಂ**ದಿ**ರಾ ಪ್ರಿಯದರ್ಶಿನಿ ಗಾಂಧಿ (19 ನವೆಂಬರ್ 1917 – 31 ಅಕ್ಟೋಬರ್ 1984) 1966 ರಿಂದ 1977 ರವೆಗೆ ಸತತ ಮೂರು ಬಾರಿ ಭಾರತ ಗಣತಂತ್ರದ ಪ್ರಧಾನ ಮಂತ್ರಿಯಾಗಿದ್ದರು ಮತ್ತು ನಾಲ್ಕನೇ ಬಾರಿ 1980 ರಿಂದ 1984 ರಲ್ಲಿ ನಡೆದ ಅವರ ಹತ್ಯೆಯವರೆಗೆ, ಒಟ್ಟು ಹದಿನೈದು ವರ್ಷಗಳ ಕಾಲ, ಪ್ರಧಾನ ಮಂತ್ರಿಯಾಗಿ ಅಧಿಕಾರದಲ್ಲಿದ್ದರು. ಅವರು ಭಾರತದ ಮೊದಲ ಮಹಿಳಾ ಪ್ರಧಾನ ಮಂತ್ರಿ. ಇಂದಿನವರೆಗೆ ಆ ಸ್ಥಾನ ಅವರ ಪಾಲಿನದ್ದೇ ಆಗಿದೆ.

## ರಾಣಿ ಲಕ್ಷ್ಮೀಬಾಯಿ

ರಾಣಿ ಲಕ್ಷ್ಮೀಬಾಯಿಯವರು ೧೯ ನವೆಂಬರ್ ೧೮೩೫ರಲ್ಲಿ ಕಾಶಿ (ವಾರಣಾಸಿ)ಯಲ್ಲಿ ಒಂದು ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಮಣಿಕರ್ಣಿಕ ಅವರ ನಿಜವಾದ ಹೆಸರಾಗಿದ್ದು ಅವರನ್ನು ಮನು ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ಅವರ ತಾಯಿ ಲಕ್ಷ್ಮೀಬಾಯಿ ೪ ವರ್ಷದವರಾಗಿರುವಾಗ ಮರಣಹೊಂದಿದರು. ಅವರ ಶಿಕ್ಷಣ ಮನೆಯಲ್ಲಿ ನಡೆಯಿತು.



# ಅಂಗ ಸಂಸ್ಥೆಗಳ ಅಂಗಳದಿಂದ


ಜಿಎಸ್‌ಎಸ್‌ಎಸ್ ಅಂಗಳದಲ್ಲಿ ರಾಜ್ಯೋತ್ಸವ ಸಂಭ್ರಮಾಚರಣೆ

ಜಿ.ಎಸ್.ಎಸ್.ಎಸ್ ಸಮೂಹ ಸಂಸ್ಥೆಗಳಲ್ಲಿ ಒಂದಾದ ಬದರಿಪ್ರಸಾದ್ ಜಿ ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವದ ಪ್ರಯುಕ್ತ 'ಕನ್ನಡ ಹಬ್ಬ' 23 ನಂವೆಬರ್ 2019 ರಂದು ಏರ್ಪಡಿಸಲಾಗಿತ್ತು. ಅದರ ಅಂಗವಾಗಿ ಕಾವ್ಯವಾಚನ ಕಾರ್ಯಕ್ರಮ ನಡೆಯಿತು. ನಮ್ಮ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಸುಬ್ರಮಣ್ಯ ಅವರು ಕಾವ್ಯ ವಾಚನ ಮಾಡಿದರು. ಮೈಸೂರು ಮಿತ್ರ ಪತ್ರಿಕೆಯಲ್ಲಿ ಇದರ ಬಗ್ಗೆ ಪ್ರಕಟವಾದ ವರದಿ.

## ಅಕ್ಕನ ಓದಿಗೋಸ್ಕರ ದಣಿವರಿಯದೆ ದುಡಿದ ತಂಗಿ

ಅಕ್ಕ ಓದಿ ವಿದ್ಯಾವಂತಳಾಗಬೇಕು, ಡಾಕ್ಟರ್ ಆಗಬೇಕೆಂಬ ಆಕೆಯ ಕನಸು ನನಸಾಗಬೇಕು. ಅದಕ್ಕೋಸ್ಕರ ತನಗೆ ಎಷ್ಟು ಕಷ್ಟ ಬಂದರೂ ಚಿಂತೆಯಿಲ್ಲ ತಾನವಳಿಗೆ ನೆರವಾಗಬೇಕು ಎಂದು ತ್ಯಾಗಜೀವಿಯಾದ ತಂಗಿಯೊಬ್ಬಳ ಕಥೆಯಿದು. ಆರೇಳು ದಶಕಗಳ ಹಿಂದೆ ಮುಂಬಯಿ ಆಡಳಿತದ ಕನ್ನಡ ಪ್ರದೇಶದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪಠ್ಯವಾಗಿದ್ದ 'ಸಾಹಿತ್ಯವಿಹಾರ' ಎಂಬ ಕನ್ನಡ ಪುಸ್ತಕದಲ್ಲಿ ನನಗಿದು ಸಿಕ್ಕಿತು. ಶ್ರಮಜೀವಿ ಮಹಾನ್ ತಂಗಿಯ ಪ್ರೇರಣಾದಾಯಿ ಶ್ರೇಷ್ಠ ವ್ಯಕ್ತಿತ್ವವನ್ನು ಅರಿಯಲಿಕ್ಕಂತೂ ಹೌದೇಹೌದು, ಜೊತೆಗೇ ನಮ್ಮ ಕಸ್ತೂರಿಕನ್ನಡ ಭಾಷೆಯ ಸೊಗಡನ್ನು, ಸುಂದರ ನಿರೂಪಣ ಶಕ್ತಿಯನ್ನು, ಆಗಿನ ಕಾಲದ ಪಠ್ಯಪುಸ್ತಕಗಳು ಎಷ್ಟು ಮೌಲ್ಯಯುತವಾಗಿದ್ದವೆಂದು ಸವಿಯಲಿಕ್ಕೂ ಇಂತಹ ಪಾಠಗಳನ್ನು ನಾವು ಆಗೊಮ್ಮೆ ಈಗೊಮ್ಮೆ ಮೆಲುಕು ಹಾಕಬೇಕು. ಈಗ ಸುದ್ದಿಮಾಧ್ಯಮಗಳಿಂದಾಗಿ ಗಬ್ಬೆದ್ದುಹೋಗಿರುವ ನಮ್ಮ ಚಿತ್ತಭಿತ್ತಿಯನ್ನು ಈ ರೀತಿಯ ಗಂಗಾಜಲ ಪ್ರೋಕ್ಷಣೆಯಿಂದ ಶುದ್ಧಗೊಳಿಸುತ್ತಿರಬೇಕು. ನನಗಂತೂ ಹಾಗೆ ಅನಿಸುತ್ತದೆ. ಓದಿ ಮುಗಿಸಿದ ಮೇಲೆ ಬಹುಶಃ ನಿಮಗೂ ಹಾಗೆಯೇ ಅನಿಸಬಹುದು. '1886ನೆಯ ಜನವರಿ ಮೊದಲ ದಿನ. ಹದಿನೆಂಟು ವರ್ಷದ ಮೇನ್ಯಳು ಮುದುಕ ತಂದೆಯನ್ನು ಹಿಂದೆ ಬಿಟ್ಟು, ಕೊರೆಯುವ ಚಳಿಯಲ್ಲಿ ತನ್ನ ಕೆಲಸಕ್ಕೋಸ್ಕರ ಹೊರಟಳು. ದೃಢ ಮನಸ್ಸಿನಿಂದ ತಂದೆಯನ್ನು ಬೀಳ್ಕೊಂಡು ರೈಲುಗಾಡಿ ಏರಿದಳು. ಒತ್ತಿ ಬರುತ್ತಿದ್ದ ಅಳುವನ್ನು ತಡೆದುಕೊಂಡು ತಂದೆಯನ್ನು ನೋಡಿ ಮೃದುವಾಗಿ ನಕ್ಕಳು. ಗಾಡಿ ಹೊರಟು ತಂದೆಯ ಆಕೃತಿ ಮರೆಯಾದ ಕೂಡಲೆ, ಮೇನ್ಯಳಿಗೆ ದುಃಖ ನಿರಾಶೆಗಳು ಹೃದಯವನ್ನೆಲ್ಲ ತುಂಬಿದವು. ಹುಚ್ಚುಹುಚ್ಚು ಭಾವನೆಗಳೆಲ್ಲ ಅವಳನ್ನು ಹೆದರಿಸಿ ನಡುಗಿಸಿದವು. ಈಗ ಸಿಕ್ಕಿರುವ ಹೊಸ ಮನೆಯೂ ಹಿಂದಿನ ಮನೆಗಳಂತೆ ಆದರೆ? ತಾನು ಇಲ್ಲದಾಗ ತಂದೆ ಖಾಯಿಲೆ ಬಿದ್ದರೆ? ತಿರುಗಿ ತನ್ನ ಮುದಿ ತಂದೆಯನ್ನು ನೋಡುವುದಕ್ಕೆ ಆಗದೆ ಹೋದರೆ? ಅಳು ಉಕ್ಕಿಉಕ್ಕಿ ಬಂತು. ಕಣ್ಣೊರೆಸಿಕೊಂಡಷ್ಟೂ ಒತ್ತಿಒತ್ತಿ ಬರುತ್ತಿತ್ತು.

ಮುಂದುವರಿಯುವುದು.........

# Test and Examination committee

**Semester Examination Oct/Nov 2019**

**Daily Report**

**Day 19: 21th November 2019**

| | |
|---|---|
| **Room No** | 2 |
| **Course** | III B.Com |
| **Subject** | Business Taxation - III |
| **Invigilator** | Subramanaya K.R. |
| **Students Present** | 21 |
| **Absent** | 0 |
| **Malpractice** | NIL |

Report:
**Smt Shruthi D**
Office Superintendent Exams

## Democracy of India – M.K.Gandhi

***There is no human institution but has its dangers. The greater the institution the greater the chances of abuse. Democracy is a great institution and therefore it is liable to be greatly abused. The remedy, therefore, is not avoidance of democracy but reduction of possibility of abuse to a minimum.*** ***Young India, 7-5-'31***


**Chief Editor**
**Prof K U Basappa, Principal**
**Executive Editor**
**Shruthi D, HOD, Dept of BCA**
**Photo courtesy**
**Mr Subyamany K R, HOD, Dept of BBA**
**Mr Anil M, HOD, Dept of English**
**Kumari. Priyanka M N, Dept of Commerce**
**Smt Poornima K, HOD, Dept of Commerce**


**Photo Corner**

